



- ಬೆಣ್ಣೆ ಹಣ್ಣಿನೊಂದಿಗೆ ಕೆಲವು ಹನಿ ಟೀ ಟ್ರೀ ತೈಲ ಬೆರೆಸಿ ಹಚ್ಚುವುದು ಕೂಡ ಉತ್ತಮ ಪರಿಹಾರ.
- ಅರ್ಧ ಕಪ್ ಪಪ್ಪಾಯಿ ಹಣ್ಣಿನ ತಿರುಳಿನೊಂದಿಗೆ 2 ದೊಡ್ಡ ಚಮಚ ಹೆಸರಿಟ್ಟು ಹಾಗೂ 2 ಚಮಚ ತಾಜಾ ಕೆನೆ ಬೆರೆಸಿ ಕೂದಲಿಗೆ ಹಚ್ಚಿಕೊಂಡು 20 ನಿಮಿಷದ ನಂತರ ತೊಳೆದುಕೊಳ್ಳಿ.
- ಒಂದು ಬಾಳೆಹಣ್ಣನ್ನು ಮ್ಯಾಶ್ ಮಾಡಿ ಒಂದು ಚಮಚ ಗ್ಲಿಸರಿನ್ ಹಾಗೂ 2 ಟೇಬಲ್ ಚಮಚ ನಿಂಬೆರಸ ಮಿಶ್ರಿಸಿ ಲೇಪಿಸಿಕೊಂಡು 30 ನಿಮಿಷ ಬಿಟ್ಟು ತಲೆಸ್ನಾನ ಮಾಡಿ.
- ಚೆನ್ನಾಗಿ ರುಬ್ಬಿದ ಮೆಂತ್ಯ ಸೊಪ್ಪು ಅರ್ಧ ಕಪ್ ಮತ್ತು ಕಾಲು ಕಪ್ ತೆಂಗಿನ ಹಾಲಿನ ಮಿಶ್ರಣವನ್ನು ಹಚ್ಚಿ 15–20 ನಿಮಿಷದ ಬಳಿಕ ತೊಳೆಯಬೇಕು.
- 4 ದೊಡ್ಡ ಚಮಚ ಆಲಿವ್ ಎಣ್ಣೆಯೊಂದಿಗೆ 6–8 ಹನಿ ಲ್ಯಾವೆಂಡರ್ ತೈಲ ಹಾಕಿ ಕೂದಲಿಗೆ ಮಾಲೀಶು ಮಾಡಿ ಒಂದು ಗಂಟೆಯ ನಂತರ ತೊಳೆಯಿರಿ.
- ಎರಡು ಕಪ್ ನೀರಿಗೆ ಸಣ್ಣಗೆ ಹೆಚ್ಚಿದ ಒಂದು ಬೆಂಡೆಕಾಯಿ ಹಾಕಿ ಚೆನ್ನಾಗಿ ಕುದಿಸಿ, ನಂತರ ನೀರನ್ನು ಸೋಸಿಕೊಂಡು 2–3 ಚಮಚ ಬೆಳ್ಳುಳ್ಳಿ ರಸ ಬೆರೆಸಿ ಹಚ್ಚಿ 15 ನಿಮಿಷ ಬಿಟ್ಟು ತಲೆಸ್ನಾನ ಮಾಡಬೇಕು.
- 3–4 ಟೇಬಲ್ ಚಮಚ ಮೊಸರು, ನುಣ್ಣಗೆ ಅರೆದ ಎಲೆಕೋಸು 2 ಟೇಬಲ್ ಚಮಚ ಮತ್ತು ಒಂದು ಚಮಚ ಜೇನುತುಪ್ಪ ಬೆರೆಸಿ ತಯಾರಿಸಿದ ಮಿಶ್ರಣವನ್ನು ಹಚ್ಚಿ 30 ನಿಮಿಷದ ಬಳಿಕ ತೊಳೆದು ಹಾಕಿ.
- ಎಳ್ಳೆಣ್ಣೆ ಹಾಗೂ ಹಸಿ ಹಾಲಿನ ಮಿಶ್ರಣದಿಂದ ಮಾಲೀಶು ಮಾಡಿಕೊಂಡು 60 ನಿಮಿಷದ ನಂತರ ತೊಳೆಯಿರಿ.

## ತೈಲಮಯ ಕೂದಲು

- ಸಿಪ್ಪೆ ತೆಗೆದು ಅರೆದ ಸೌತೆಕಾಯಿ ಅರ್ಧ ಕಪ್ ಮತ್ತು 2 ಚಮಚ ಅಡುಗೆ ಸೋಡಾ ಮಿಶ್ರ ಮಾಡಿ ಪ್ಯಾಕ್ ಹಾಕಿಕೊಂಡು ಒಂದು ಗಂಟೆಯ ಬಳಿಕ ತೊಳೆಯಬೇಕು. ಈ ಹೇರ್ ಪ್ಯಾಕ್ ಫಂಗಲ್ ಸೋಂಕನ್ನು ತಪ್ಪಿಸುತ್ತದೆ.
- ಒಂದು ಟೊಮ್ಯಾಟೊವನ್ನು ರುಬ್ಬಿ ಇದಕ್ಕೆ 2–3 ಚಮಚ ಈರುಳ್ಳಿ ರಸ ಸೇರಿಸಿ ಕೂದಲಿಗೆ ಲೇಪಿಸಿ. ಒಣಗಿದ ನಂತರ ತಲೆಸ್ನಾನ ಮಾಡಿ.
- 4 ಟೇಬಲ್ ಚಮಚ ಅಲೊವೆರಾ ಜೆಲ್‌ಗೆ 2–3 ಚಮಚ ಗ್ರೀನ್ ಟೀ ಪುಡಿ ಸೇರಿಸಿ ಹಚ್ಚಬಹುದು.
- ಒಂದು ಮಗ್ ಬೆಚ್ಚಗಿನ ನೀರಿಗೆ ಒಂದು ದೊಡ್ಡ ಚಮಚ ಕಲ್ಲುಉಪ್ಪು ಹಾಕಿ ಕರಗಿಸಿ, ಈ ನೀರಿನಿಂದ ಕೂದಲನ್ನು ರಿನ್ಸ್ ಮಾಡಿ 2 ನಿಮಿಷ ಬಿಟ್ಟು ತೊಳೆಯಿರಿ.
- 3 ಚಮಚ ಕಿತ್ತಳೆ ಸಿಪ್ಪೆಯ ಪುಡಿಯೊಂದಿಗೆ ಅರ್ಧ ಚಮಚ ಪುಡಿ ಮಾಡಿದ ಕರಿ ಮೆಣಸಿನ ಕಾಳು ಹಾಗು ಅವಶ್ಯಕತೆ ಇದ್ದಷ್ಟು ಮಜ್ಜಿಗೆ ಹಾಕಿ ಪೇಸ್ಟ್ ತಯಾರಿಸಿ. ಇದನ್ನು ಕೂದಲಿಗೆ ಹಚ್ಚಿ 30 ನಿಮಿಷ ಆದ ಮೇಲೆ ಸ್ನಾನ ಮಾಡಿ.
- ಅರ್ಧ ಕಪ್ ಸೇಬಿನ ರಸಕ್ಕೆ ಸ್ವಲ್ಪ ಕಡಲೆ ಹಿಟ್ಟು ಸೇರಿಸಿ ಬಳಸಿ, 20 ನಿಮಿಷದ ಬಳಿಕ ತೊಳೆಯಬೇಕು.
- ಪುಡಿ ಮಾಡಿದ ಕೊತ್ತಂಬರಿ ಬೀಜ 3 ಚಮಚ, 3 ಚಮಚ ಶುಂಠಿ ರಸ ಮತ್ತು 2 ಚಮಚ ಜೇನುತುಪ್ಪದ ಮಿಶ್ರಣ ಹೊಟ್ಟನ್ನು ನಿವಾರಿಸಿ ನೆತ್ತಿಯನ್ನು ಶುಭ್ರಗೊಳಿಸುತ್ತದೆ.
- 4 ಚಮಚ ಆಲೂಗೆಡ್ಡೆ ರಸ, 2 ಚಮಚ ತುಳಸಿ ರಸ ಮತ್ತು 2 ಚಮಚ ಮುಲ್ತಾನಿ ಮಿಟ್ಟಿ ಮಿಶ್ರಿಸಿ ಪ್ಯಾಕ್ ಹಾಕಿಕೊಂಡು ಅರ್ಧ ಗಂಟೆಯ ಬಳಿಕ ತಲೆಸ್ನಾನ ಮಾಡಿ.
- 3 ಚಮಚ ಬೇವಿನ ಎಣ್ಣೆಗೆ ಸ್ವಲ್ಪ ರೋಸ್ ಮೆರಿ ತೈಲ ಬೆರೆಸಿ ಕೂದಲಿಗೆ ಮಾಲೀಶು ಮಾಡಿ 20 ನಿಮಿಷ ಬಿಟ್ಟು ಸ್ನಾನ ಮಾಡಬೇಕು.
- 3–4 ದೊಡ್ಡ ಚಮಚ ಅರೆದಿರುವ ಪುದಿನಾ ಸೊಪ್ಪಿಗೆ 2 ಚಮಚ ಜೀರಿಗೆ ಎಣ್ಣೆ ಹಾಗೂ 4 ಚಮಚ ಬೀಟ್‌ರೂಟ್ ರಸ ಸೇರಿಸಿ ಹಚ್ಚಿ 10 ನಿಮಿಷ ಕಳೆದ ಬಳಿಕ ತಲೆ ತೊಳೆಯಿರಿ.
- ಮಿಶ್ರ ಕೂದಲಿನವರು ಹುಣಸೆ ರಸ, ಅಕ್ಕಿ ಹಿಟ್ಟು ಹಾಗೂ ಮೊಸರಿನ ಮಿಶ್ರಣವನ್ನು ಹೇರ್ ಪ್ಯಾಕ್ ಆಗಿ ಬಳಸುವುದು ಉತ್ತಮ. ಇದು ಕೂದಲಿನ ಬುಡವನ್ನು ಶುಚಿಯಾಗಿರಿಸುತ್ತದೆ. ಇದರ ಜೊತೆಗೆ ಬೆಲ್ಲವನ್ನು ಸೇರಿಸಬಹುದು.